KA / :G-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜನವರಿ ೨೦, ೨೦೧೧ (ಪುಷ್ಯ ೩೦, ಶಕ ವರ್ಷ ೧೯೩೨)	ಸಂಚಿಕೆ ೩

ಭಾಗ – ೩

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

OFFICE OF THE BLOCK EDUCATION OFFICER, DHARWAD TALUKA RANGE

FORM - I

(See Rule 19)

NOTIFICATION

Shri **Shekhar. Yallappa. Killiketar,** working as Assistant Teacher in the Govt-Higher Primary School Kalle Tq: Dharwad (Education Department) of Office of the Block Education Officer Dharwad Taluka Rang is permitted to change his name as **Shri SHEKHAR YALLAPPA KATTIMANI.**

Block Educational Officer,
Taluka Range, Dharwad.

PD-2

DEPARTMENT PW. PORTS & I.W.T. DEPARTMENT

Office of the Executive Engineer, PW. Ports & I.W.T. Department Belgaum Division, Belgaum

No.EE/PWD/E-1/CN/2010-11

(See Rule 9)

NOTIFICATION

Shri **IMAMSAB HAZRATSAB BELGAVI** working as Work Inspector in the PW, Ports & Inland Water Transport Department of Office of the Assistant Executive Engineer, PW.Ports & I.W.T. Department, Sub.Dn. No.1, Belgaum is permitted to change his name to **Shri IMAMSAB HAZRATSAB MULLA.**

Executive Engineer, PW. Ports & I.W.T.
Department Belgaum Division, Belgaum

PD-3

DEPARTMENT OF POLICE

OFFICE OF THE COMMANDANT IInd Bn. K.S.R.P. BELGAUM

FORM - I

(See Rule 9)

NOTIFICATION

Shri **HANAMAPPA. DADESAB. JEER** working as POLICE CONSTABLE Department of / Office of the COMMANDANT IIND BN K.S.R.P. BELGAUM is permitted to change his name to **HANAMAPPA. DADAPPA. JULAKATTI.**

Commandant,
IInd Bn. K.S.R.P. Belgaum.

PD-4

FORM - IV

(See Rule 12)

NOTICE

It is hereby notified that the undersigned I have changed my name from **NAGESH FAKKIRAPPA** to **NAGESH FAKKIRAPPA SIDDAPPANAVAR**

PD-5 **NAGESH FAKKIRAPPA**

ಕಾರ್ಮಿಕ ಇಲಾಖೆ

ಕಾರ್ಮಿಕ ಆಯುಕ್ತರವರ ಕಛೇರಿ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29

ಅಧಿಸೂಚನೆ

ಸಂಖ್ಯೆ:ಎನ್‌ಜಿಓ–01/ಸಿಆರ್–126/09–10, ಬೆಂಗಳೂರು, ದಿನಾಂಕ:8ನೇ ಡಿಸೆಂಬರ್, 2010

Shri NARAYANA B.G. Working as **Senior Labour Inspector,** 24th Circle Bangalore in the Labour Department of Office of the **Labour Officer, Sub Division-III,** Bangalore is permitted to change his name to **SHRIMANNARAYANA B.G.**

PD-6 Commissioner of Labour.

ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಕಛೇರಿ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಸಂಖ್ಯೆ : ಎ2/ಉಅಸಂ/ಪ್ರಾವಿ/ಸಿಆರ್–38/2010–11, ದಿನಾಂಕ:07–01–2011

ವಿಷಯ: 2010–11ನೇ ಸಾಲಿಗೆ ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಆನೆ ನಿರೋದಕ ಸಕಂದಕ ನಿರ್ಮಾಣದ ಕಾಮಗಾರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆಯ ಬಗ್ಗೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2010–11ನೇ ಸಾಲಿನಲ್ಲಿ ಕೆಳಕಂಡ ಯೋಜನೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

ದಿನಾಂಕ:29–01–2011 ರಂದು ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಕೆಳಗೆ ಸಹಿ ಮಾಡಿದವರ ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಗಳನ್ನು ಅಪರಾಹ್ನ 4.00 ಗಂಟೆಗೆ ತೆಗೆಯಲಾಗುವುದು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನೆಡಯದೇ ಇದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ: 07–02–2011 ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕ್ರ ಸಂ.	ವಲಯದ ಹೆಸರು	ಸ್ಥಳದ ಹೆಸರು	ಕಾಮಗಾರಿಯ ವಿವರ	ಭೌತಿಕ (ಕಿ.ಮಿ ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
1.	ಕನಕಪುರ	ಮಂಜುನಾಥ ಎಸ್.ಎಫ್ ಚಾಮುಂಡಿ ಪುರ	ಆನೆ ನಿರೋಧಕ ಕಂದಕ ನಿರ್ಮಾಣ	2 ಕಿ.ಮೀ	3.986	0.3986	28.02.2011
2.	ಸಾತನೂರು	ಚೀಲಂದ ವಾಡಿ ಎಸ್.ಎಫ್ ವೀರಸಂದ್ರ	ಆನೆ ನಿರೋಧಕ ಕಂದಕ ನಿರ್ಮಾಣ	1 ಕಿ.ಮೀ	1.993	0.1993	28.02.2011
3.	ಮಾಗಡಿ	ಸಾವನದುರ್ಗ ಎಸ್.ಎಫ್ ವೀರೇಗೌಡನದೊಡ್ಡಿ ಮಂಚನಬೆಲೆ	ಆನೆ ನಿರೋಧಕ ಕಂದಕ ನಿರ್ಮಾಣ	1 ಕಿ.ಮೀ	1.993	0.1993	28.02.2011

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಪಿ.ಆರ್.9 ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಸಂಖ್ಯೆ : ಎ2/ಬಿಯುಡಿ/ಸಿಆರ್– 43/2010–11, ದಿನಾಂಕ: 07–01–2011

ವಿಷಯ: 2010–11ನೇ ಸಾಲಿಗೆ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹೊಸ ನರ್ಸರಿ ಅಭಿವೃದ್ಧಿ ಕಾಮಗಾರಿ ಕಾಟೇಜ್ ನಿರ್ಮಾಣ ಹಾಗೂ ಇತರೆ ಕೆಲಸಗಳಿಗೆ ಟೆಂಡರ್ ಕರೆದಿರುವ ಬಗ್ಗೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2010–11ನೇ ಸಾಲಿನಲ್ಲಿ ಈ ವಿಭಾಗದ ವ್ಯಾಪ್ತಿಯಲ್ಲಿ ಹೊಸ ನರ್ಸರಿ ಅಭಿವೃದ್ಧಿ ಕಾಮಗಾರಿ ಕಾಟೇಜ್ ನಿರ್ಮಾಣ ಹಾಗೂ ಇತರ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

ದಿನಾಂಕ:29–01–2011 ರಂದು ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಕೆಳಗೆ ಸಹಿ ಮಾಡಿದವರ ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರಿಂದ ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4.00 ಗಂಟೆಗೆ ತೆಗೆಯಲಾಗುವುದು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನೆಡಯದೇ ಇದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ:07–02–2011 ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಚೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕ್ರ. ಸಂ.	ವಲಯದ ಹೆಸರು	ಸ್ಥಳದ ಹೆಸರು	ಕಾಮಗಾರಿಯ ವಿವರ	ಭೌತಿಕ (ಕಿ.ಮಿ ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
1.	ಮಾಗಡಿ	ಸಾವನದುರ್ಗ ಎಸ್.ಎಫ್	ಹೊಸ ನರ್ಸರಿ ಅಭಿವೃದ್ಧಿ ಕಾಮಗಾರಿ (ಕೇಂದ್ರ ಸಸ್ಯ ಕ್ಷೇತ್ರ)	1	6.00	0.30	28.02.2011
2.	ಮಾಗಡಿ	ಸಾವನದುರ್ಗ ಎಸ್.ಎಫ್	ಕಾಟೇಜ್ ನಿರ್ಮಾಣ	1	2.75	0.13750	28.02.2011
3.	ಮಾಗಡಿ	ಸಾವನದುರ್ಗ ಎಸ್.ಎಫ್	ಕೊಳವೆ ಬಾವಿ ಕೊರೆದು ಪಂಪ್ ಅಳವಡಿಸಿ ನೀರು ಸೌಲಭ್ಯವನ್ನು ಪ್ರವಾಸಿಗರಿಗೆ ಒದಗಿಸುವುದು	1	1.5	0.07500	28.02.2011

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪಿ.ಆರ್.10 ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಸಂಖ್ಯೆ : ಎ2/ಉಅಸಂ/ಮರು ಟೆಂಡರ್/ ಸಿಆರ್–65/2010–11, ದಿನಾಂಕ: 07–01–2011

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2010–11ನೇ ಸಾಲಿಗೆ ವಿವಿಧ ಯೋಜನೆಯಡಿಯಲ್ಲಿ ಈ ಕೆಳಗೆ ನಮೂದಿಸಿರುವ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ದಿನಾಂಕ:21.01.2011ರ ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಕೆಳಗೆ ಸಹಿ ಮಾಡಿದವರ ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರಿಂದ ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4.00 ಗಂಟೆಗೆ ತೆಗೆಯಲಾಗುವುದು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ:29.01.2011ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕ್ರ. ಸಂ.	ವಲಯದ ಹೆಸರು	ಸ್ಥಳದ ಹೆಸರು	ಕಾಮಗಾರಿಯ ವಿವರ	ಯೋಜನೆ	ಭೌತಿಕ (ಕಿ.ಮಿ ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
1.	ಕನಕಪುರ	ಮಂಜುನಾಥ ಎಸ್.ಎಫ್. ಚಾಮುಂಡಿಪುರ	ಮುಂಗಡ ಕಾಮಗಾರಿ	KFDF	50 ಹೆ.	664000=00	66400=00	28.02.2011
2.	ಸಾತನೂರು	ಚೀಲಂದವಾಡಿ ಎಸ್.ಎಫ್. ವೀರಸಂದ್ರ	ಮುಂಗಡ ಕಾಮಗಾರಿ	KFDF	30 ಹೆ.	398400=00	39840=00	28.02.2011

ಕ್ರ. ಸಂ.	ವಲಯದ ಹೆಸರು	ಸ್ಥಳದ ಹೆಸರು	ಕಾಮಗಾರಿಯ ವಿವರ	ಯೋಜನೆ	ಭೌತಿಕ (ಕಿ.ಮಿ ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
3.	ಸಾತನೂರು	ಚೀಲಂದವಾಡಿ ಎಸ್.ಎಫ್. ವೀರಸಂದ್ರ	ಮುಂಗಡ ಕಾಮಗಾರಿ	KFDF	26.50 ಹೆ.	135192=00	13519=00	28.02.2011
4.	ರಾಮನಗರ	ಹಂದಿಗುಂದಿ ಎಸ್.ಎಫ್. ಬಸವನಪುರ ಮತ್ತು ಜವಳಗೆರೆ ಎಸ್.ಎಫ್.	ಮುಂಗಡ ಕಾಮಗಾರಿ	KFDF	50 ಹೆ.	664000=00	66400=00	28.02.2011
5.	ಚನ್ನಪಟ್ಟಣ	ಮಾಕಳಿ ಎಸ್.ಎಫ್. ಎಮ್ಮೆಕೊಂದನಳ್ಳ ಬ್ಲಾಕ್–1 & ಬ್ಲಾಕ್–2	ಮುಂಗಡ ಕಾಮಗಾರಿ	KFDF	50 ಹೆ.	664000=00	66400=00	28.02.2011
6.	ಮಾಗಡಿ	ಚೀಲೂರು ಎಸ್.ಎಫ್. ಚೀಲೂರು	ಮುಂಗಡ ಕಾಮಗಾರಿ	C.O.P.	25 ಹೆ.	366350=00	36635=00	28.02.2011
7.	ಮಾಗಡಿ	ಚೀಲೂರು ಎಸ್.ಎಫ್. ಮಣಗಣಹಳ್ಳಿ	ಮುಂಗಡ ಕಾಮಗಾರಿ	C.O.P.	25 ಹೆ.	366350=00	36635=00	28.02.2011
8.	ಚನ್ನಪಟ್ಟಣ	ಚಿಕ್ಕಮಣ್ಣುಗುಡ್ಡೆ ಎಸ್.ಎಫ್.	ಮುಂಗಡ ಕಾಮಗಾರಿ	C.O.P.	25 ಹೆ.	346250=00	34625=00	28.02.2011
9.		ಮಾಕಳಿ ಎಸ್.ಎಫ್.	ಮುಂಗಡ ಕಾಮಗಾರಿ	C.O.P.	33 ಹೆ.	457050=00	45705=00	28.02.2011
10.	ಚನ್ನಪಟ್ಟಣ	ಮಾಕಳಿ ಎಸ್.ಎಫ್. ತೇಗದ ಮರದಗುಡ್ಡ ಬ್ಲಾಕ್–1	ಮುಂಗಡ ಕಾಮಗಾರಿ	CSSAPR FC	17 ಹೆ.	245344=00	24534=00	28.02.2011
11.		ಮಾಕಳಿ ಎಸ್.ಎಫ್. ತೇಗದ ಮರದಗುಡ್ಡ ಬ್ಲಾಕ್–2	ಮುಂಗಡ ಕಾಮಗಾರಿ	CSSAPR FC	17 ಹೆ.	245344=00	24534=00	28.02.2011
12.		ಮಾಕಳಿ ಎಸ್.ಎಫ್. ತೇಗದ ಮರದಗುಡ್ಡ ಬ್ಲಾಕ್–3	ಮುಂಗಡ ಕಾಮಗಾರಿ	CSSAPR FC	18 ಹೆ.	259776=00	25977=00	28.02.2011
13.		ಮಾಕಳಿ ಎಸ್.ಎಫ್. ತೇಗದ ಮರದಗುಡ್ಡ ಬ್ಲಾಕ್–3	ಮುಂಗಡ ಕಾಮಗಾರಿ	CSSAPR FC	18 ಹೆ.	259776=00	25977=00	28.02.2011

ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಪಿ.ಆರ್.11

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಕಛೇರಿ, ವಿವಿಧ ಫಸಲಿನ ಸಂಕ್ಷಿಪ್ತ ಮರು ಟೆಂಡರ್ ಹರಾಜು ಪ್ರಕಟಣೆ

ಸಂಖ್ಯೆ : ಎಸಿಟಿಎ1/ಸೇಲ್ಸ್/ವಿವಿಧ ಫಸಲು/ ಸಿಆರ್–9/2010–11, ದಿನಾಂಕ: 07–01–2011

ಮರು ಟೆಂಡರ್/ ಹರಾಜು ಪ್ರಕಟಣೆ

ವಿಷಯ: ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಫಾರೆಸ್ಟ್ ಮೈನರ್ ಫಾರೆಸ್ಟ್ ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ (1) ಸಿಟ್ರಡೋರ ಎಲೆ ಫಸಲು (2) ತೂಪ್ರ ಎಲೆ (ಬೀಡಿ ಎಲೆ)ಗಳ ಮರು ಟೆಂಡರ್/ ಹರಾಜು ಬಗ್ಗೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್ ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ (1) ಸಿಟ್ರಡೋರ ಎಲೆ ಫಸಲು (2) ತೂಪ್ರ ಎಲೆ (ಬೀಡಿ ಎಲೆ) ಫಸಲು 2010–11 (ವಾರ್ಷಿಕ) ಅವಧಿಗೆ ಅಂದರೆ ದಿನಾಂಕ:01.07.2010 ರಿಂದ 30.06.2011ರ ಅವಧಿಗೆ ಅಥವಾ ಟೆಂಡರ್/ ಹರಾಜು ಒಪ್ಪಿಕೊಂಡ ದಿನದಿಂದ 30ನೇ ಜೂನ್ 2011ರವರೆಗೆ ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗೆ ತಪ್ಸೀಲಿನಲ್ಲಿ ಸೂಚಿಸಿರುವ ಪ್ರಕಾರವಾಗಿ ಟೆಂಡರ್/ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು ಇಷ್ಟವುಳ್ಳ ನೊಂದಾಯಿತ ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು.

ಪ್ರಕಟಣೆಯಲ್ಲಿ ನಮೂದಿಸಿರುವ ಅರಣ್ಯೋತ್ಪನ್ನವು ನಿರ್ಧರಿತ ಬಂಜರು ಭೂಮಿ, ಗೋಮಾಳ, ಹರಾಜು ಗ್ರಾಮ ಠಾಣ ಮತ್ತು ಸಮುದಾಯ ಉದ್ದೇಶಕ್ಕಾಗಿ ಬಿಟ್ಟಿರುವ ಪ್ರದೇಶಗಳು ತಹಶೀಲ್ದಾರರಿಂದ ಪ್ರತ್ಯೇಕವಾಗಿ ಮಾರಾಟ ಮಾಡಿರುವ ಮತ್ತು ಮಾರಲ್ಪಡುವ ಪ್ರದೇಶಗಳು, ಮುನ್ಸಿಪಲ್, ನಗರಸಭೆ, ಜಿಲ್ಲಾಪಂಚಾಯತ್, ಮಂಡಲ ಪಂಚಾಯತ್, ಗ್ರಾಮ ಪಂಚಾಯತ್ ಹಾಗೂ ಈ ವಿಭಾಗದ ನಿಯಂತ್ರಣಕ್ಕೆ ಒಳಪಡದೆ ಇರುವ ಪ್ರದೇಶಗಳನ್ನು ಹೊರತುಪಡಿಸಿ ಈ ಟೆಂಡರ್ ಕಂ ಹರಾಜಿನಲ್ಲಿ ಕೈಬಿಡಲಾಗಿದೆ.

ಕ್ರ. ಸಂ.	ಫಸಲಿನ ರೂಢಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ/ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ/ ಹರಾಜಿನ ಹಣ
1.	ಸಿಟ್ರಡೋರ ಫಸಲು			
	ಮಾಗಡಿ ತಾಲ್ಲೂಕು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ:20.01.2011 ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಟೆಂಡರ್/ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನದ ಟೆಂಡರ/ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ 29.01.2011 ರಂದು ಮರು ಟೆಂಡರ್/ ಹರಾಜು ಮಾಡಲಾಗುವುದು.	ರೂ.5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್
2.	ತೂಪ್ರ ಎಲೆ (ಬೀಡಿ ಫಸಲು)			
	ಚನ್ನಪಟ್ಟಣ ತಾಲ್ಲೂಕು			

ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಪಿ.ಆರ್.12

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ

ಹರಾಜು ಪ್ರಕಟಣೆ

ಸಂಖ್ಯೆ: ಎಸಿಟಿಎ1/ಉಅಸಂ/ಮರ ಹರಾಜು/ವಿವ–7/10–11, ದಿನಾಂಕ:07.01.2011

ವಿಷಯ: ರಾಮನಗರ ಪ್ರಾದೇಶಿಕ ವಿಭಾಗಕ್ಕೆ ಸೇರಿದ ರಾಮನಗರ ವಲಯ ವ್ಯಾಪ್ತಿಯ ಮೈಸೂರು ರಸ್ತೆ ಜಂಕ್ಷನ್‌ನಿಂದ ಕೋಕೋಕೋಲಾ ಫ್ಯಾಕ್ಟರಿ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಸಲುವಾಗಿ ಸರಪಳಿ 2.5 ನಿಂದ 3.0 ಕಿ.ಮೀವರೆಗೆ (ಬಿಡದಿ ಕೈಗಾರಿಕಾ ಪ್ರದೇಶ) ರಸ್ತೆಯ ಎರಡು ಬದಿಗಳ ವಿವಿಧ ಜಾತಿಯ ಮರಗಳ ಬಹಿರಂಗ ಹರಾಜು ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ವಿಭಾಗಕ್ಕೆ ಸೇರಿದ ರಾಮನಗರ ವಲಯ ವ್ಯಾಪ್ತಿಯ ಮೈಸೂರು ರಸ್ತೆ ಜಂಕ್ಷನ್‌ನಿಂದ ಕೋಕೋಕೋಲಾ ಫ್ಯಾಕ್ಟರಿ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಸಲುವಾಗಿ ಉಳಿದ ಸರಪಳಿ 2.5 ನಿಂದ 3.0 ಕಿ.ಮೀವರೆಗೆ (ಬಿಡದಿ ಕೈಗಾರಿಕಾ ಪ್ರದೇಶ) ರಸ್ತೆಯ ಎರಡು ಬದಿಗಳ ವಿವಿಧ ಜಾತಿಯ

ಮರಗಳ ಬಹಿರಂಗ ಹರಾಜು ಮಾಡಲು ಈ ಕೆಳಕಂಡ ಷೆಡ್ಯೂಲ್ ನಲ್ಲಿರುವಂತೆ ಸ್ಥಳ ಹಾಗೂ ದಿನಾಂಕದಂದು ಈ ಕೆಳಸಹಿದಾರರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕೃತ ಅಧಿಕಾರಿಯು ಕೆಳಕಂಡ ಷರತ್ತುಗಳ ಅನ್ವಯ ಹರಾಜನ್ನು ಮಾಡಲು ಉದ್ದೇಶಿಸಿ ಪ್ರಕಟಣೆ ಹೊರಡಿಸಲಾಗಿದೆ. ಇಚ್ಚೆಯುಳ್ಳ ಖರೀದಿದಾರರು ಮೇಲ್ಕಂಡ ಸ್ಥಳದ ಮರಗಳನ್ನು ಹರಾಜಿಗೆ ಮುನ್ನವೇ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸಿ ಈ ಕೆಳಕಂಡ ಷರತ್ತುಗೊಳಪಟ್ಟು ಮರಗಳನ್ನು ಖರೀದಿಸಬಹುದಾಗಿರುತ್ತದೆ.

ಷೆಡ್ಯೂಲ್

ಕ್ರ. ಸಂ	ವಲಯ	ಹರಾಜಿಗೆ ಇರುವ ಮರಗಳ ಜಾತಿ ಮತ್ತು ಸಂಖ್ಯೆ ರಸ್ತೆಯ ಎಡಭಾಗ		ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
1	ರಾಮನಗರ ಪ್ರಾದೇಶಿಕ ವಲಯ, ರಾಮನಗರ	ಆಲ	ಲಾಟ್–1	ದಿನಾಂಕ: 21.01.2011 ಬೆಳಿಗ್ಗೆ 11:30 ಗಂಟೆ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಪ್ರಾದೇಶಿಕ ಅರಣ್ಯ ವಿಭಾಗ, ಜಾನಪದ ಲೋಕದ ಎದುರು, ರಾಮನಗರ
2		ನೇರಳೆ	ಲಾಟ್–1		
3		ಆಲ	ಲಾಟ್–1		
4		ಜಂಬು ನೇರಳೆ	ಲಾಟ್–1		
5		ಆಲ	ಲಾಟ್–1		
6		ಆಲ	ಲಾಟ್–1		
7		ಅರಳಿ	ಲಾಟ್–2		
8		ನೇರಳೆ	ಲಾಟ್–2		
9		ಹುಲಚಿ	ಲಾಟ್–2		
10		ಹುಲಚಿ	ಲಾಟ್–2		
11		ನೇರಳೆ	ಲಾಟ್–2		
12		ಹುಲಚಿ	ಲಾಟ್–2		
13		ಹುಲಚಿ	ಲಾಟ್–2		
14		ಹುಲಚಿ	ಲಾಟ್–2		
15		ಹುಲಚಿ	ಲಾಟ್–2		
16		ಆಲ	ಲಾಟ್–2		
17		ಆಲ	ಲಾಟ್–2		
18		ಆಲ	ಲಾಟ್–2		
19		ಆಲ	ಲಾಟ್–3		
20		ನೇರಳೆ	ಲಾಟ್–3		
21		ಹುಲಚಿ	ಲಾಟ್–3		
22		ನೇರಳೆ	ಲಾಟ್–3		
23		ಬೇವು	ಲಾಟ್–3		
24		ನೇರಳೆ	ಲಾಟ್–3		
25		ಆಲ	ಲಾಟ್–3		
26		ನೇರಳೆ	ಲಾಟ್–4		
27		ಹಿಪ್ಪೆ	ಲಾಟ್–4		
28		ಹಿಪ್ಪೆ	ಲಾಟ್–4		
29		ಹುಣಸೆ	ಲಾಟ್–4		
30		ಹಿಪ್ಪೆ	ಲಾಟ್–4		
31		ನೇರಳೆ	ಲಾಟ್–5		
32		ನೇರಳೆ	ಲಾಟ್–5		
33		ನೇರಳೆ	ಲಾಟ್–5		

ಕ್ರ. ಸಂ	ವಲಯ	ಹರಾಜಿಗೆ ಇರುವ ಮರಗಳ ಜಾತಿ ಮತ್ತು ಸಂಖ್ಯೆ		ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
		ರಸ್ತೆಯ ಎಡಭಾಗ			
34		ನೇರಳೆ	ಲಾಟ್–5		
35		ನೇರಳೆ	ಲಾಟ್–5		
36		ಅತ್ತಿ	ಲಾಟ್–5		
37		ಆಲ	ಲಾಟ್–5		

ವಿ. ಗೀತಾಂಜಲಿ

ಪಿ.ಆರ್.13

ಉಪ ಅರಣ್ಯ ಸಂರಕ್ಷಣಾಧಿಕಾರಿ,

ರಾಮನಗರ ವಿಭಾಗ, ರಾಮನಗರ.

ಆಯ್ಕೆ ಪ್ರಾಧಿಕಾರ ಹಾಗೂ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು,

6ನೇ ಮಹಡಿ, ಕಾವೇರಿ ಭವನ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು–560009

ಅಧಿಸೂಚನೆ ಸಂಖ್ಯೆ:ಡಿಪಿಎನ್:ಸಿಶಾ:2:181 :2010–11, ದಿನಾಂಕ:07.01.2011

ವಿಷಯ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿನ ಶೀಘ್ರಲಿಪಿಗಾರರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ:11ಸೇಹಿಮು:2001, ದಿನಾಂಕ:18.05.2001

2) ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್:13:ಎಸ್‌ಬಿಸಿ:2001, ದಿನಾಂಕ:21.11.2001.

3) ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಧಿಸೂಚನೆ ಸಂ:ಡಿಪಿಎನ್:ಸಿಶಾ:2:101:01–02, ದಿನಾಂಕ:19.05.2004 (ರಾಜ್ಯ ಪತ್ರ ದಿ:27.05.04)

4) ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಧಿಸೂಚನೆ ಸಂ:ಡಿಪಿಎನ್:ಸಿಶಾ–2:2:2009–10, 27.10.2009.(ರಾಜ್ಯ ಪತ್ರ ದಿನಾಂಕ:5.11.2009)

ಉಲ್ಲೇಖ (4)ರ ಅಧಿಸೂಚನೆಯ ಪ್ರಕಾರ, ಭರ್ತಿಯಾಗದ **2 ಪರಿಶಿಷ್ಟ ಪಂಗಡದ ಶೀಘ್ರಲಿಪಿಗಾರರ** ಹುದ್ದೆಗಳನ್ನು ಭರ್ತಿ ಮಾಡಬೇಕಾಗಿರುತ್ತದೆ. ಆದ್ದರಿಂದ, ಶೀಘ್ರಲಿಪಿಗಾರರ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ನಿಗದಿಪಡಿಸಿದ ಅರ್ಜಿ ನಮೂನೆ–1ರ ದ್ವಿಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:**11.02.2011**

2) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ವಿಳಾಸ:

"ಆಯ್ಕೆ ಪ್ರಾಧಿಕಾರ ಹಾಗೂ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, 6ನೇ ಮಹಡಿ, ಕಾವೇರಿ ಭವನ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು–560009".

3) ಅರ್ಜಿ ನಮೂನೆ–1ರ ದ್ವಿಪ್ರತಿಗಳಲ್ಲಿ ಎಲ್ಲಾ ಮಾಹಿತಿಗಳನ್ನು ತುಂಬಿ ಸಲ್ಲಿಸತಕ್ಕದ್ದು.

4) ಭರ್ತಿ ಮಾಡಬೇಕಾಗಿರುವ ಹುದ್ದೆಗಳು ಮತ್ತು ಅವುಗಳ ವರ್ಗೀಕರಣ ಕೆಳಕಂಡಂತಿವೆ.

ಎ)	ಶೀಘ್ರಲಿಪಿಗಾರರು (ಬ್ಯಾಕ್‌ಲಾಗ್ ಹುದ್ದೆಗಳು)	
	ಪರಿಶಿಷ್ಟ ಪಂಗಡ	ಒಟ್ಟು
	02	02

ಹುದ್ದೆಗಳ ವರ್ಗೀಕರಣ:

1.	ಪರಿಶಿಷ್ಟ ಪಂಗಡ ಮಹಿಳಾ ಅಭ್ಯರ್ಥಿ – 01	 ಗ್ರಾಮೀಣ ಅಭ್ಯರ್ಥಿ – 01

6. ವಿದ್ಯಾರ್ಹತೆಗಳು: ಅಭ್ಯರ್ಥಿಗಳು ಕೆಳಕಂಡ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರತಕ್ಕದ್ದು.

ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ		ನಿಗದಿಪಡಿಸಲಾದ ವಿದ್ಯಾರ್ಹತೆಗಳು	
1	ಶೀಘ್ರಲಿಪಿಗಾರರು: ರೂ. 7275–175–7800–200–8600–225–9500–250–10500–300–12300–350–13350 ಮತ್ತು ಅರ್ಹ ವಿಶೇಷ ವೇತನ	1.	ಕರ್ನಾಟಕ ಸರ್ಕಾರದ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ		ನಿಗದಿಪಡಿಸಲಾದ ವಿದ್ಯಾರ್ಹತೆಗಳು	
		2.	ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಕನ್ನಡ ಮತ್ತು ಆಂಗ್ಲ ಪ್ರೌಢ ದರ್ಜೆಯ ಶೀಘ್ರಲಿಪಿ ಪರೀಕ್ಷೆಯಲ್ಲಿ, ತೇರ್ಗಡೆ ಅಥವಾ ತತ್ಸಮಾನ ವಿದ್ಯಾರ್ಹತೆ.
		3.	ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಕನ್ನಡ ಮತ್ತು ಆಂಗ್ಲ ಪ್ರೌಢ ದರ್ಜೆಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಅಥವಾ ತತ್ಸಮಾನ ವಿದ್ಯಾರ್ಹತೆ.

7. ವಯೋಮಿತಿ: ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು 18 ವರ್ಷಕ್ಕೆ ಮೀರಿರಬೇಕು ಮತ್ತು ಈ ಕೆಳಕಂಡಂತೆ ವಯೋಮಿತಿಯ ಒಳಗಿರಬೇಕು.

ಅ) ಪರಿಶಿಷ್ಠ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ–40 ವರ್ಷಗಳು.

8. ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಕೊಡಬೇಕಾಗಿರುವುದಿಲ್ಲ.

9. ನಿಗದಿಪಡಿಸಿದ ಅರ್ಜಿ ನಮೂನೆ–Iನ್ನು ಸರ್ಕಾರಿ ಪುಸ್ತಕ ಮಳಿಗೆ ಅಥವಾ ಅಧಿಕೃತ ಮಾರಾಟಗಾರರಿಂದ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡಿ ಖರೀದಿಸಬಹುದು.

10. ನೇಮಕಾತಿ ವಿಧಾನ: ಅಭ್ಯರ್ಥಿಗಳ ಆಯ್ಕೆಯನ್ನು : "ದಿ ಕರ್ನಾಟಕ ಸ್ಟೇಟ್ ಸಿವಿಲ್ ಸರ್ವೀಸಸ್" (ಅನ್‌ಫಿಲ್ಡ್ ವೆಕೆನ್ಸಿಸ್ ರಿಸರ್ವ್ಡ್ ಫಾರ್ ದಿ ಪರ್ಸನ್ಸ್ ಬಿಲಾಂಗಿಂಗ್ ಟು ದಿ ಶೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ದಿ ಶೆಡ್ಯೂಲ್ಡ್ ಟ್ರೈಬ್ಸ್) (ಸ್ಪೆಷಲ್ ರೆಕ್ರೂಟ್ಮೆಂಟ್) ರೂಲ್ಸ್ 2001 ರ ಪ್ರಕಾರ (ಅಧಿಸೂಚನೆ ಸಂಖ್ಯೆ:ಡಿಪಿಎಆರ್:13:ಎಸ್‌ಬಿಸಿ:2001, ದಿ:21.11.2001) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮತ್ತು ವಯಸ್ಸಿನ ಆಧಾರದ ಮೇರೆಗೆ ಮಾಡಲಾಗುವುದು. 29 ವರ್ಷದಿಂದ 40 ವರ್ಷದ ಒಳಗಿನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ 18 ರಿಂದ 29 ವರ್ಷದ ಒಳಗಿನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

11. ವಿಶೇಷ ಸೂಚನೆಗಳು: ಅರ್ಜಿ ನಮೂನೆ–Iನ್ನು ಸಲ್ಲಿಸುವಾಗ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ಸ್ವಯಂ ದೃಢೀಕೃತ ಪ್ರತಿಗಳೊಂದಿಗೆ ಸಲ್ಲಿಸಬೇಕು.

ಅ) ವಿದ್ಯಾರ್ಹತೆಯ ಶೈಕ್ಷಣಿಕ ಪ್ರಮಾಣ ಪತ್ರಗಳು.

ಆ) ಹುಟ್ಟಿದ ತಾರೀಖಿನ ಬಗ್ಗೆ ದೃಢೀಕರಿಸುವ ಪ್ರಮಾಣ ಪತ್ರಗಳು.

ಇ) ಅಭ್ಯರ್ಥಿಯು ಅಂತಿಮವಾಗಿ ಕಲಿತ ಶಾಲೆಯ ಮುಖ್ಯಸ್ಥರು ಕೊಟ್ಟಿರುವ ನಡತೆಯ ಪ್ರಮಾಣ ಪತ್ರಗಳು ಮತ್ತು ಇಬ್ಬರು ಗಣ್ಯ ವ್ಯಕ್ತಿಗಳಿಂದ ನೀಡಲ್ಪಟ್ಟ ನಡತೆಯ ಪ್ರಮಾಣ ಪತ್ರಗಳು.

ಈ) ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸರ್ಕಾರದ ಆದೇಶದ ಪ್ರಕಾರ ಪರಿಶಿಷ್ಠ ಪಂಗಡದ ಪ್ರಪತ್ರವನ್ನು ಲಗತ್ತಿಸಬೇಕು.

ಉ) ಮೀಸಲಾತಿ ಸೌಲಭ್ಯ ಪಡೆಯಲಿಚ್ಛಿಸುವ ಗ್ರಾಮೀಣ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:08:ಸೇನೆನಿ:2001, ದಿ:13.02.2001ರ ಪ್ರಕಾರ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಿರಬೇಕು.

ಊ) ಮಾಜಿ ಸೈನಿಕರಾಗಿದ್ದ (ಪರಿಶಿಷ್ಟ ಪಂಗಡ) ಸಂದರ್ಭದಲ್ಲಿ ಸೈನಿಕ ಸೇವೆಯಿಂದ ಬಿಡುಗಡೆ ಹೊಂದಿದ ಅಥವಾ ಮುಕ್ತಾಯಗೊಳಿಸಿದ ಬಗೆಗಿನ ಪ್ರಮಾಣ ಪತ್ರ.

ಋ) ಸರ್ಕಾರಿ ಸೇವೆಯಲ್ಲಿರುವ ಪರಿಶಿಷ್ಠ ಪಂಗಡದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಇಲಾಖಾ ಮುಖ್ಯಸ್ಥರಿಂದ ಅನುಮತಿ ಪಡೆದು ಕಛೇರಿ ಮೂಲಕ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ಕಳುಹಿಸಬೇಕು.

2. ಅ) ಅಭ್ಯರ್ಥಿಯು ತನ್ನ ಇತ್ತೀಚಿನ ಎರಡು ಪಾಸ್ ಪೋರ್ಟ್ ಸೈಜಿನ ಭಾವ ಚಿತ್ರಗಳಲ್ಲಿ ಒಂದನ್ನು ಅರ್ಜಿಯ ಬಲಗಡೆ ಮೇಲ್ಭಾಗದಲ್ಲಿ ಅಂಟಿಸಬೇಕು. ಹಾಗೂ ಇನ್ನೊಂದು ಭಾವಚಿತ್ರವನ್ನು ಲಕೋಟೆಯಲ್ಲಿ ಇಟ್ಟಿರಬೇಕು.

ಆ) ಪ್ರಮಾಣ ಪತ್ರಗಳನ್ನು ಲಗತ್ತಿಸದಿರುವ ಅರ್ಜಿಗಳನ್ನು ಹಾಗೂ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಇ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲಕೋಟೆಯ ಮೇಲೆ **"ಶೀಘ್ರಲಿಪಿಗಾರರ: ಹುದ್ದೆಗೆ ಅರ್ಜಿ"** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಈ) ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕದ ಯಾವುದೇ ಭಾಗದಲ್ಲಾದರೂ ಕೆಲಸ ಮಾಡಲು ಸಿದ್ದರಾಗಿರಬೇಕು.

ಉ) ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪ್ರಚಾರ ಅಥವಾ ಶಿಫಾರಸ್ಸುಗಳನ್ನು ಮಾಡಿದರೆ ಅಂತಹವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಊ) ಅರ್ಜಿದಾರರೊಡನೆ ಪತ್ರವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

ಋ) ಮಾಜಿ ಸೈನಿಕ: ಗ್ರಾಮೀಣ ಅಭ್ಯರ್ಥಿ: ಮಹಿಳಾ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಪರಿಶಿಷ್ಟ ಪಂಗಡದ: ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ೠ) ಪರಿಶಿಷ್ಠ ಪಂಗಡಕ್ಕೆ ಸೇರಿದ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ವಯೋಮಿತಿಯಲ್ಲಿ 10 ವರ್ಷಗಳ ಹೆಚ್ಚಿನ ರಿಯಾಯಿತಿ ಇರುತ್ತದೆ.

ಹೆಚ್.ಆರ್.ರೇಣುಕ

ಪಿ.ಆರ್.5

ಆಯ್ಕೆ ಪ್ರಾಧಿಕಾರ ಹಾಗೂ ಅಭಿಯೋಗ
ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, ಬೆಂಗಳೂರು

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಶಿಂಷಾ ಭವನ, ನಂ. 720, 46ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು ಇವರ ನಡವಳಿಗಳು

ರದ್ದತಿ ಆದೇಶ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ದ್ವಿತಿಯ ದರ್ಜೆ ಸಹಾಯಕರ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯಲ್ಲಿ ದ್ವಿತಿಯ ದರ್ಜೆ ಸಹಾಯಕರೆಂದು ಅಂತಿಮವಾಗಿ ಹೆಚ್ಚುವರಿ ಪಟ್ಟಿಯಲ್ಲಿ ಗ್ರಾಮೀಣ ಅಭ್ಯರ್ಥಿಯಾಗಿ ಆಯ್ಕೆಯಾದ ಶ್ರೀ ಮಹಾಂತೇಶ ಪಡಿಯಪ್ಪ ಪಿಳಿಬಂಟರ್ ಮಾರತಹಳ್ಳಿ, ಬೆಂಗಳೂರು ಇವರ ದ್ವಿತಿಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯನ್ನು ಹೆಚ್ಚುವರಿ ಪಟ್ಟಿಯಿಂದ ರದ್ದುಪಡಿಸುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 13 ಎಸ್ ಬಿಸಿ 2001, ದಿನಾಂಕ: 21-11-2001ರನ್ವಯ ಪ್ರಕಟಿಸಿರುವ ಬ್ಯಾಕಲಾಗ್ ನೇಮಕಾತಿ ನಿಯಮಗಳು 2001

2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 6 ಸೆನನಿ 2001, ದಿನಾಂಕ 13–2–2001
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 13 ಎಸ್ ಬಿಸಿ 2001, ದಿನಾಂಕ: 01–06–2002
4. ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ: 01–08–02 (ದಿನಾಂಕ: 08–08–2002ರ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)
5. ಈ ಕಛೇರಿಯ ದ್ವಿತೀಯ ದರ್ಜೆ ಸಹಾಯಕರ ಸಮ ಸಂಖ್ಯೆ ತಾತ್ಕಾಲಿಕ ಆಯ್ಕೆಪಟ್ಟಿ ದಿನಾಂಕ: 24–03–03
6. ಸರ್ಕಾರದ ಪತ್ರ ಸಂಖ್ಯೆ:ಕಂಇ 120 ಮುನೋಸ 2001 ದಿನಾಂಕ: 01–01–04
7. ಈ ಕಛೇರಿಯ ದ್ವಿತೀಯ ದರ್ಜೆ ಸಹಾಯಕರ ಸಮ ಸಂಖ್ಯೆ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿ ದಿನಾಂಕ: 05–07–04
8. ಈ ಕಛೇರಿಯ ದ್ವಿತೀಯ ದರ್ಜೆ ಸಹಾಯಕರ ಸಮ ಸಂಖ್ಯೆ ಬ್ಯಾಕಲಾಗ್ ಅಂತಿಮ ಆಯ್ಕೆಪಟ್ಟಿ ದಿನಾಂಕ: 23–11–04
9. ಈ ಕಛೇರಿಯ ಸಮ ಸಂಖ್ಯೆ: ನೋಟೀಸ್ ದಿನಾಂಕ: 16–11–2010
10. ಮಹಾಂತೇಶ್ ಪಡಿಯಪ್ಪ ಪಿಳಿಬಂಟರ್ ಇವರ ಲಿಖಿತ ಮನವಿ ಪತ್ರ ದಿನಾಂಕ: 06–12–10.

ಪ್ರಸ್ತಾವನೆ:

ಜಿಲ್ಲಾ ನೋಂದಣಾಧಿಕಾರಿಗಳು, ಬಳ್ಳಾರಿ ಇವರು ಬಳ್ಳಾರಿ ಜಿಲ್ಲೆಯ ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಕೆಳಕಂಡಂತೆ ಬ್ಯಾಕ್‌ಲಾಗ್ ಹುದ್ದೆಗಳು ಇರುತ್ತವೆಂದು ಗುರುತಿಸಿದ್ದು, ಇದರೊಂದಿಗೆ ರಾಜ್ಯದಲ್ಲಿರುವ ಉಳಿದ ಜಿಲ್ಲಾ ನೋಂದಣಾಧಿಕಾರಿಗಳು ಅವರವರ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೇರಿಸಿಕೊಂಡು ಉಲ್ಲೇಖ (1)ರ ಬ್ಯಾಕ್‌ಲಾಗ್ ನಿಯಮಗಳನ್ವಯ ಈ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಇಪ್ಪತ್ತೈದು ಮತ್ತು ಪರಿಶಿಷ್ಟ ಪಂಗಡದ ಇಪ್ಪತ್ತು ಈ ರೀತಿ ಒಟ್ಟಾರೆ ನಲವತ್ತೈದು ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ, ಈ ಹುದ್ದೆಗಳನ್ನು ರಾಜ್ಯಾದ್ಯಂತ ಭರ್ತಿ ಮಾಡುವ ಸಲುವಾಗಿ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆ ಹೊಂದಿರಬೇಕೆಂಬ ಕನಿಷ್ಟ ವಿದ್ಯಾರ್ಹತೆಯನ್ನು

ನಿಗಧಿಪಡಿಸಿ ಈ ಕಛೇರಿಯ ಉಲ್ಲೇಖ (4)ರ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿತ್ತು.

ಕ್ರ.ಸಂ.	ಜಿಲ್ಲೆ	ಸದರಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್ ಲಾಗ್ ಹುದ್ದೆಗಳ ಸಂಖ್ಯೆ		
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1	ಬಳ್ಳಾರಿ ಜಿಲ್ಲೆ	ಒಂದು	ಎರಡು	ಮೂರು

ನಂತರ ಈ ಬಗ್ಗೆ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅವುಗಳ ಪೈಕಿ ಉಲ್ಲೇಖ (1)ರ ಬ್ಯಾಕ್ ಲಾಗ್ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಗುರುತಿಸಿ ಅವುಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿಯ ಇಪ್ಪತ್ತೈದು ಮತ್ತು ಪರಿಶಿಷ್ಟ ಪಂಗಡದ ಇಪ್ಪತ್ತು ಈ ರೀತಿ ಒಟ್ಟಾರೆ ಗುರುತಿಸಲ್ಪಟ್ಟ ನಲವತ್ತೈದು ಬ್ಯಾಕ್‌ಲಾಗ್ ಹುದ್ದೆಗಳಿಗೆ ಅನುಗುಣವಾಗಿ ಮೆರಿಟ್ ಮತ್ತು ಮೀಸಲಾತಿ ಪ್ರಕಾರ ಉಲ್ಲೇಖ (7)ರನ್ವಯ ದ್ವಿತೀಯ ದರ್ಜೆ ಸಹಾಯಕರ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ತದನಂತರ ಸದರಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಬ್ಯಾಕಲಾಗ್ ನಿಯಮಗಳನ್ವಯ ಅಂತಿಮಗೊಳಿಸಿ ಒಟ್ಟಾರೆ ನಲವತ್ತೈದು ಅಭ್ಯರ್ಥಿಗಳಿರುವ ದ್ವಿತೀಯ ದರ್ಜೆ ಸಹಾಯಕರ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:23–11–2004ರಂದು ಉಲ್ಲೇಖ (8)ರನ್ವಯ ಪ್ರಕಟಿಸಲಾಯಿತು.

ತದನಂತರ ಸದರಿ ಜಿಲ್ಲೆಯಲ್ಲಿ ಮೇಲ್ಕಂಡಂತೆ ಗುರುತಿಸಲ್ಪಟ್ಟ ಪರಿಶಿಷ್ಟ ಜಾತಿಯ ಈ ಒಂದು ಬ್ಯಾಕ್‌ಲಾಗ್ ಹುದ್ದೆಯಲ್ಲಿ ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ಅಭ್ಯರ್ಥಿಯಾದ ಕೆ.ಎಂ. ಮುತ್ತುಲಕ್ಷ್ಮಿ ಎಂಬುವವರನ್ನು ಮತ್ತು ಮೇಲ್ಕಂಡಂತೆ ಗುರುತಿಸಲ್ಪಟ್ಟ ಪರಿಶಿಷ್ಟ ಪಂಗಡದ ಎರಡು ಬ್ಯಾಕ್‌ಲಾಗ್ ಹುದ್ದೆಗಳ ಪೈಕಿ ಒಂದು ಬ್ಯಾಕ್‌ಲಾಗ್ ಹುದ್ದೆಯಲ್ಲಿ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಅಭ್ಯರ್ಥಿಯಾದ ಪುಷ್ಪಲತಾ ಆರ್. ಎಂಬುವವರನ್ನು ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡುವ ಮೂಲಕ ಸದರಿ ಜಿಲ್ಲೆಯಲ್ಲಿ ಮೇಲ್ಕಂಡಂತೆ ಗುರುತಿಸಲ್ಪಟ್ಟ ಪರಿಶಿಷ್ಟ ಜಾತಿಯ ಒಂದು ಬ್ಯಾಕ್‌ಲಾಗ್ ಹುದ್ದೆಯನ್ನು ಮತ್ತು ಪರಿಶಿಷ್ಟ ಪಂಗಡದ ಒಂದು ಬ್ಯಾಕ್‌ಲಾಗ್ ಹುದ್ದೆಯನ್ನು ಈಗಾಗಲೇ ಭರ್ತಿ ಮಾಡಲಾಗಿದೆ.

ಇದರ ಜೊತೆಗೆ ಸದರಿ ಜಿಲ್ಲೆಯಲ್ಲಿ ಮೇಲ್ಕಂಡಂತೆ ಗುರುತಿಸಲ್ಪಟ್ಟು ಭರ್ತಿಯಾಗದೇ ಉಳಿದ ಪರಿಶಿಷ್ಟ ಪಂಗಡದ ಇನ್ನೊಂದು ಬ್ಯಾಕ್‌ಲಾಗ್ ಹುದ್ದೆಯನ್ನು ಭರ್ತಿ ಮಾಡುವ ಸಲುವಾಗಿ ಉಲ್ಲೇಖ (8) ರನ್ವಯ ಪ್ರಕಟಿಸಿದ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಅಂತಿಮ ಆಯ್ಕೆ ಪಟ್ಟಿಯ ಮುಖ್ಯಪಟ್ಟಿಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಜಿಲ್ಲಾ ನೋಂದಣಾಧಿಕಾರಿ, ಬಳ್ಳಾರಿ ಇವರು ಉಪ ನೋಂದಣಿ ಕಛೇರಿ, ಕುರುಗೋಡು ಇಲ್ಲಿಗೆ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿದ್ದಾಗ್ಯೂ ಕೆಳಕಂಡ ಅಭ್ಯರ್ಥಿಯು ಸದರಿ ಕಛೇರಿಯಲ್ಲಿ ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಇವರಿಗೆ ನೀಡಿದ ನೇಮಕಾತಿ ಆದೇಶವನ್ನು ಜಿಲ್ಲಾ ನೋಂದಣಾಧಿಕಾರಿ, ಬಳ್ಳಾರಿ ಇವರು ಕಾನೂನು ರೀತ್ಯ ರದ್ದುಪಡಿಸಿ ಈ ವಿಷಯನ್ನು ಕಛೇರಿಗೆ ತಿಳಿಸಿರುತ್ತಾರೆ.

ಕ್ರಮ ಸಂಖ್ಯೆ	ಹೆಸರು	SC/ST	ಮೀಸಲಾತಿ ವರ್ಗೀಕರಣ
1.	ಸಂಜೀವ ಎಸ್. ಪಾಟೀಲ್ ಕುಲಿಗೋಡ ತಾ: ಗೋಕಾಕ ಜಿಲ್ಲೆ: ಬೆಳಗಾಂ–591250	ST	ಪರಿಶಿಷ್ಟ ಪಂಗಡ ಗ್ರಾಮೀಣ ಅಭ್ಯರ್ಥಿ ಮುಖ್ಯಪಟ್ಟಿ.

ಈ ರೀತಿ ಉಲ್ಲೇಖ (8) ರ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಯ ಮುಖ್ಯ ಪಟ್ಟಿಯಲ್ಲಿ ಆಯ್ಕೆಯಾದ ಪರಿಶಿಷ್ಟ ಪಂಗಡದ ಮೇಲ್ಕಂಡ ಈ ಬ್ಯಾಕ್‌ಲಾಗ್ ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗದೇ ತಮ್ಮ ನೇಮಕಾತಿ ಹಕ್ಕನ್ನು ಕಳೆದುಕೊಂಡ ಕಾರಣ ಮೇಲ್ಕಂಡಂತೆ ಬಳ್ಳಾರಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟು ಭರ್ತಿಯಾಗದೇ ಉಳಿದ ಪರಿಶಿಷ್ಟ ಪಂಗಡದ ಈ ಒಂದು ಬ್ಯಾಕ್‌ಲಾಗ್ ಹುದ್ದೆಯಲ್ಲಿ ಹೆಚ್ಚುವರಿ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಇನ್ನೊಬ್ಬ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಮೇಲ್ಕಂಡ ಅಭ್ಯರ್ಥಿಗೆ ಬದಲಾಗಿ, ನೇಮಕಾತಿ ಮಾಡಿಕೊಳ್ಳಲು ಈ ಪ್ರಕರಣವನ್ನು ಪರಿಶೀಲಿಸಲಾಗಿ ಕೆಳಕಂಡ ಅಭ್ಯರ್ಥಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರವು ಈಗಾಗಲೇ ಈ ಕಛೇರಿಗೆ ಬಂದಿದ್ದು, ಸದರಿ ಅಭ್ಯರ್ಥಿಯ ನಡತೆಯ ಬಗ್ಗೆ ಪೂರ್ವ ಚರಿತ್ರಾ ಪರಿಶೀಲನಾ ವರದಿಯು ಪೊಲೀಸ್ ಇಲಾಖೆಯಿಂದ ಬಂದಿಲ್ಲದ ಕಾರಣ ಸದರಿ ವರದಿಯನ್ನು ಕಳುಹಿಸುವಂತೆ ಪೊಲೀಸ್ ಕಮಿಷನರ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ದಿನಾಂಕ: 10–02–09 ರಂದು ಪತ್ರ ಬರೆಯಲಾಯಿತು.

ತದನಂತರ ಕೋರಿದ ವರದಿಯು ಬರಲಿಲ್ಲವಾದ್ದರಿಂದ ದಿನಾಂಕ: 21–09–2010, ಹಾಗೂ 16–11–2010 ರಂದು ಪೊಲೀಸ್ ಕಮಿಷನರ್, ಬೆಂಗಳೂರು ನಗರ ಇವರಿಗೆ ನೆನಪೋಲೆ ನೀಡಿ ಸದರಿ ಪೊಲೀಸ್ ಕಮಿಷನರ್ ಇವರಿಗೆ ಬರೆದ ಸದರಿ ಪತ್ರದ ಮತ್ತು ನೆನಪೋಲೆಗಳ ಪ್ರತಿಯನ್ನು ಕೆಳಕಂಡ ಅಭ್ಯರ್ಥಿಗೂ ಸಹ ಕಳುಹಿಸಿ, ತಮ್ಮ ಪೂರ್ವ ಚರಿತ್ರಾ ಪರಿಶೀಲನಾ ವರದಿಯನ್ನು ಪೊಲೀಸ್ ಕಮಿಷನರ್ ರವರಿಂದ ಈ ಕಛೇರಿಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಕೆಳಕಂಡ ಅಭ್ಯರ್ಥಿಗೆ ನಿರ್ದೇಶಿಸಲಾಯಿತು.

ಈ ಬಗ್ಗೆ ಎಷ್ಟೇ ಪತ್ರ ಬರೆದರೂ ಕೆಳಕಂಡ ಅಭ್ಯರ್ಥಿಯ ನಡತೆ ಬಗ್ಗೆ ಪೂರ್ವ ಚರಿತ್ರಾ ಪರಿಶೀಲನಾ ವರದಿಯು ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಇವರಿಂದ ಬಾರದೇ ಇದ್ದುದರಿಂದ ಬ್ಯಾಕ್‌ಲಾಗ್ ಅಂತಿಯ ಆಯ್ಕೆಯ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾಗಿರುವ ಕೆಳಕಂಡ ಅಭ್ಯರ್ಥಿಗೆ ದಿನಾಂಕ 16–11–2010 ರಂದು ಉಲ್ಲೇಖ (9)ರನ್ವಯ ನೋಟೀಸ್ ನೀಡಿ ಈ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕಾತಿ ಹೊಂದಲು ಇಷ್ಟವಿದ್ದಲ್ಲಿ ಪೊಲೀಸ್ ಇಲಾಖೆಯಿಂದ ಪೂರ್ವ ಚರಿತ್ರಾ ಪರಿಶಿಲನಾ ವರದಿಯನ್ನು ಈ ಕಛೇರಿಗೆ ಕಳಿಸುವ

ವ್ಯವಸ್ಥೆ ಮಾಡುವಂತೆಯೂ, ಒಂದು ವೇಳೆ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕಾತಿ ಹೊಂದಲು ಇಷ್ಟವಿಲ್ಲದಿದ್ದಲ್ಲಿ, ತಮಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕಾತಿ ಹೊಂದಲು ಇಷ್ಟವಿಲ್ಲವೆಂದು, ತಮ್ಮ ಬದಲಿಗೆ ಬೇರೊಬ್ಬ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳಲು ತಮ್ಮ ಯಾವುದೇ ತಂಟೆ ತಕರಾರುಗಳು ಇಲ್ಲವೆಂಬ ಲಿಖಿತ ಮನವಿಯನ್ನು ಈ ಕಛೇರಿಗೆ ಕಳಿಸುವಂತೆ ಕೆಳಕಂಡ ಅಭ್ಯರ್ಥಿಗೆ ದಿನಾಂಕ 16–11–2010ರಂದು ಉಲ್ಲೇಖ (9)ರನ್ವಯ ನೋಟೀಸ್ ನೀಡಿ ನಿರ್ದೇಶಿಸಲಾಯಿತು, ದಿನಾಂಕ 16–11–2010 ರಂದು ನೀಡಿದ ಈ ಕಛೇರಿಯ ನೋಟೀಸ್ ಅನ್ನು ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯು ದಿನಾಂಕ 06–12–2010 ರಂದು ಸ್ವೀಕರಿಸಿರುತ್ತಾರೆ.

ಮೇಲ್ಕಂಡಂತೆ ದಿನಾಂಕ 16–11–2010 ರಂದು ನೀಡಿದ ನೋಟಿಸ್‌ಗೆ ಉತ್ತರವಾಗಿ ಕೆಳಕಂಡ ಅಭ್ಯರ್ಥಿಯು ಉಲ್ಲೇಖ (10)ರನ್ವಯ ದಿನಾಂಕ: 06–12–2010 ರಂದು ಈ ಕಛೇರಿಗೆ ಲಿಖಿತ ಮನವಿಯೊಂದನ್ನು ಸಲ್ಲಿಸಿ, ಸದರಿ ಮನವಿಯಲ್ಲಿ ತಾವು ಈಗಾಗಲೇ ಬೇರೆ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತೇನೆಂದು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ದ್ವಿತೀಯ ದರ್ಜೆ ಸಹಾಯಕನೆಂದು ಆಯ್ಕೆಯಾಗಿರುವ ತಾನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ನೇಮಕಾತಿ ಹೊಂದಲು ತನಗೆ ಇಷ್ಟವಿರುವುದಿಲ್ಲವೆಂದು ಹಾಗೂ ಈ ಕಾರಣಗಳಿಂದ ತನ್ನ ಪೂರ್ವ ಚರಿತ್ರಾ ಪರಿಶೀಲನಾ ವರದಿಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಹಾಜರು ಪಡಿಸುವ ಅಗತ್ಯವಿರುವುದಿಲ್ಲವೆಂದು, ಆದ್ದರಿಂದ ಕಾನೂನು ರೀತ್ಯ ತನ್ನ ಬದಲಿಗೆ ಬೇರೊಬ್ಬ ಅರ್ಹ ಅಭ್ಯರ್ಥಿಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಆಯ್ಕೆ ಮಾಡಿಕೊಂಡು ನೇಮಕ ಮಾಡಿಕೊಳ್ಳುವಂತೆಯೂ ಹಾಗೂ ಇಂತಹ ಬೇರೊಬ್ಬ ಅಭ್ಯರ್ಥಿಯ ನೇಮಕಕ್ಕೆ ತನ್ನ ಯಾವುದೇ ತಂಟೆ ತಕರಾರುಗಳು ಮತ್ತು ಅಭ್ಯಂತರಗಳೇನೂ ಇರುವುದಿಲ್ಲವೆಂದು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯಲ್ಲಿನ ತನ್ನ ಅಂತಿಮ ಹೆಚ್ಚುವರಿ ಆಯ್ಕೆಯನ್ನು ರದ್ದುಪಡಿಸಬೇಕೆಂದು ತನ್ನ ಸ್ವಇಚ್ಛೆಯಿಂದ ಉಲ್ಲೇಖ (10) ರನ್ವಯ ಲಿಖಿತ ಮನವಿಯನ್ನು ಸಲ್ಲಿಸಿರುತಾರೆ.

ಕ್ರಮ ಸಂಖ್ಯೆ	ಹೆಸರು	SC/ST	ಮೀಸಲಾತಿ ವರ್ಗೀಕರಣ
1.	ಮಹಂತೇಶ್ ಪಡಿಯಪ್ಪ ಪಿಳಿಬಂಟರ್ ಬಿನ್ ಪಡಿಯಪ್ಪ ಮುದಿಯಪ್ಪ ಪಿಳಿಬಂಟರ್, ಶ್ರೀರಾಮ್ ಪಾಲಿ ಕ್ಲಿನಿಕ್, Opp: HAL Quarters, ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತಹಳ್ಳಿ, ಬೆಂಗಳೂರು–37	ST	ಪರಿಶಿಷ್ಟ ಪಂಗಡ ಗ್ರಾಮೀಣ ಅಭ್ಯರ್ಥಿ ಹೆಚ್ಚುವರಿ ಪಟ್ಟಿ

ಮೇಲ್ಕಂಡ ಕಾರಣಗಳಿಂದ ಉಲ್ಲೇಖ (8)ರನ್ವಯ ದಿನಾಂಕ: 23–11–2004 ರಂದು ಈ ಕಛೇರಿಯಿಂದ ಪ್ರಕಟಿಸಿರುವ ಈ ಇಲಾಖೆಯ ಪರಿಶಿಷ್ಟ ಪಂಗಡದ ದ್ವಿತಿಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯ ಬ್ಯಾಕ್‌ಲಾಗ್ ಹೆಚ್ಚುವರಿ ಪಟ್ಟಿಯಲ್ಲಿ ಗ್ರಾಮೀಣ ಅಭ್ಯರ್ಥಿಯಾಗಿ ದ್ವಿತಿಯ ದರ್ಜೆ ಸಹಾಯಕರೆಂದು ಅಂತಿಮವಾಗಿ ಆಯ್ಕೆಯಾಗಿರುವ ಕೆಳಕಂಡ ಪರಿಶಿಷ್ಟ ಪಂಗಡದ ಗ್ರಾಮೀಣ ಅಭ್ಯರ್ಥಿಯಾದ ಶ್ರೀ ಮಹಾಂತೇಶ್ ಪಡಿಯಪ್ಪ ಪಿಳಿಬಂಟರ್, ಮಾರತಹಳ್ಳಿ, ಬೆಂಗಳೂರು ಇವರ ಅಂತಿಮ ಬ್ಯಾಕ್‌ಲಾಗ್ ಹೆಚ್ಚುವರಿ ಆಯ್ಕೆಯನ್ನು ಸದರಿಯವರ ಕೋರಿಕೆಯಂತೆ ಅಂತಿಮ ಬ್ಯಾಕ್‌ಲಾಗ್ ದ್ವಿತಿಯ ದರ್ಜೆ ಸಹಾಯಕರ ಹೆಚ್ಚುವರಿ ಪಟ್ಟಿಯಿಂದ ರದ್ದುಪಡಿಸುವುದು ಉಚಿತವೆಂದು ಮನಗಂಡು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: EST 1–273/2001–02, ದಿನಾಂಕ:07–01–2011

ಆದ್ದರಿಂದ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಉಲ್ಲೇಖ (8)ರನ್ವಯ ದಿನಾಂಕ:23–11–2004 ರಂದು ಈ ಕಛೇರಿಯಿಂದ ಪ್ರಕಟಿಸಿರುವ ಈ ಇಲಾಖೆಯ ಪರಿಶಿಷ್ಟ ಪಂಗಡದ ದ್ವಿತಿಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯ ಬ್ಯಾಕ್‌ಲಾಗ್ ಹೆಚ್ಚುವರಿ ಪಟ್ಟಿಯಲ್ಲಿ ಗ್ರಾಮೀಣ ಅಭ್ಯರ್ಥಿಯಾಗಿ ದ್ವಿತಿಯ ದರ್ಜೆ ಸಹಾಯಕರೆಂದು ಆಯ್ಕೆಯಾಗಿರುವ ಕೆಳಕಂಡ ಪರಿಶಿಷ್ಟ ಪಂಗಡದ ಗ್ರಾಮೀಣ ಅಭ್ಯರ್ಥಿಯಾದ ಮಹಾಂತೇಶ್ ಪಡಿಯಪ್ಪ ಪಿಳಿಬಂಟರ್, ಮಾರತಹಳ್ಳಿ, ಬೆಂಗಳೂರು ಇವರ ಕೋರಿಕೆಯಂತೆ ಉಲ್ಲೇಖ (8)ರ ಈ ಇಲಾಖೆಯ ಅಂತಿಮ ಬ್ಯಾಕ್‌ಲಾಗ್ ದ್ವಿತಿಯ ದರ್ಜೆ ಸಹಾಯಕರ ಹೆಚ್ಚುವರಿ ಪಟ್ಟಿಯಿಂದ ಇವರ ಅಂತಿಮ ಬ್ಯಾಕ್‌ಲಾಗ್ ಹೆಚ್ಚುವರಿ ಆಯ್ಕೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಈ ಮೂಲಕ ರದ್ದು ಪಡಿಸಲಾಗಿದೆ ಅಂದರೆ Cancel ಮಾಡಲಾಗಿದೆ.

ಕೆಳಕಂಡ ಪರಿಶಿಷ್ಟ ಪಂಗಡದ ಗ್ರಾಮೀಣ ಅಭ್ಯರ್ಥಿಯಾದ ಮಹಾಂತೇಶ್ ಪಡಿಯಪ್ಪ ಪಿಳಿಬಂಟರ್, ಮಾರತಹಳ್ಳಿ, ಬೆಂಗಳೂರು ಇವರು ಇನ್ನು ಮುಂದೆ ಈ ಇಲಾಖೆಯ ದ್ವಿತಿಯ ದರ್ಜೆ ಸಹಾಯಕರ ಹುದ್ದೆಯ ಮೇಲೆ ಯಾವುದೇ ರೀತಿಯ ನೇಮಕಾತಿ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂದು ಮತ್ತು ಯಾವುದೇ ರೀತಿಯ ನೇಮಕಾತಿ ಹಕ್ಕನ್ನು ಸಹ ಸಾಧಿಸತಕ್ಕದ್ದಲ್ಲವೆಂದು ಈ ಮೂಲಕ ಆದೇಶಿಸಿದೆ.

ಕ್ರ. ಸಂ.	ಅಭ್ಯರ್ಥಿ ಹೆಸರು ಮತ್ತು ವಿಳಾಸ	ಜನ್ಮ ದಿನಾಂಕ	07–09–02 ರ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ವ–ತಿಂ–ದಿ	ವಿದ್ಯಾರ್ಹತೆ ಮತ್ತು ಶೇಕಡಾವಾರು ಅಂಕಗಳು	ಷರಾ
1	ಮಹಾಂತೇಶ್ ಪಡಿಯಪ್ಪ ಪಿಳಿಬಂಟರ್ ಬಿನ್ ಪಡಿಯಪ್ಪ ಮುದಿಯಪ್ಪ ಪಿಳಿಬಂಟರ್, ಶ್ರೀರಾಮ್ ಪಾಲಿ ಕ್ಲಿನಿಕ್, Opp: HAL Quarters, ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತಹಳ್ಳಿ, ಬೆಂಗಳೂರು–560037	22–5–1973	29–03–15	ಎಸ್.ಎಸ್.ಎಲ್.ಸಿ. 69.167	ಪರಿಶಿಷ್ಟ ಪಂಗಡದ ಗ್ರಾಮೀಣ ಅಭ್ಯರ್ಥಿಯಾಗಿ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಯ ಹೆಚ್ಚುವರಿ ಪಟ್ಟಿಯಲ್ಲಿನ ಇವರ ಅಂತಿಮ ಹೆಚ್ಚುವರಿ ಆಯ್ಕೆಯನ್ನು ಈ ಮೂಲಕ ರದ್ದುಪಡಿಸಿದೆ.

ಎಸ್.ಎನ್. ಜಯರಾಮ್

ಪಿ.ಆರ್.7

ಆಯ್ಕೆ ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಆಯುಕ್ತರವರ ಕಾರ್ಯಾಲಯ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, 2ನೇ ಮಹಡಿ
ಸರ್.ಎಂ. ವಿಶ್ವೇಶ್ವರಾಯ ಚಿಕ್ಕ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560 001
ಪ್ರಕಟಣೆ ಸಂಖ್ಯೆ ಆಪಸಂ/ಸಿಬ್ಬಂದಿ–2/ವಿವ–271/2009–10 ಬೆಂಗಳೂರು ದಿನಾಂಕ: 11.01.2011
ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕ: 10.02.2011

ಅಧಿಸೂಚನೆ

ವಿಷಯ: 276 ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ತುಂಬಲು ಅರ್ಜಿಗಳನ್ನು ಆಹ್ವಾನಿಸಿರುವುದು

ಸರ್ಕಾರದ ಅಧಿಸೂಚನೆ ಸಂಖ್ಯೆ ಪಸಂಮೀ/94/ಪಸಸೇ/2009 ದಿನಾಂಕ:08.04.2010 ನಿಯಮಾವಳಿಯನ್ವಯ 276 ಖಾಲಿ ಪಶುವೈದ್ಯಾಧಿಕಾರಿಗಳ **ಬಿ** ಗುಂಪಿನ ಹುದ್ದೆಗಳನ್ನು (ವೇತನ ಶ್ರೇಣಿ. 13000–23850) ಕರ್ನಾಟಕ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆ (ಪಶುವೈದ್ಯಾಧಿಕಾರಿಗಳ ನೇರ ನೇಮಕಾತಿ) (ವಿಶೇಷ ನೇಮಕಾತಿ) ನಿಯಮಗಳು 2009 ರನ್ವಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ. 30757–30758 / 2010 (ಎಸ್–ಕೆಎಟಿ) ತೀರ್ಪು ದಿನಾಂಕ: 05.10.2010 ರಂತೆ ಆಯ್ಕೆಗಾಗಿ ಪರಿಗಣಿಸಲು ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ದ್ವಿಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಈ ಪ್ರಕಟಣೆಯಲ್ಲಿ ಕಾಣಿಸಿರುವ ನಮೂನೆಯಲ್ಲಿ ಬೆರಳಚ್ಚು ಮಾಡಿದ/ಗಣಕೀಕೃತ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಕೈಬರಹದ/ಜೆರಾಕ್ಸ್/ಮುದ್ರಿತ ಅಥವಾ ಇತರೆ ಯಾವುದೇ ಆಯ್ಕೆ ಪ್ರಾಧಿಕಾರದ / ಆಯೋಗದ ಅರ್ಜಿಗಳನ್ನು ಒಪ್ಪಲಾಗುವುದಿಲ್ಲ.

1. ಆಯ್ಕೆಯನ್ನು ಬಿ.ವಿ.ಎಸ್‌ಸಿ./ಬಿ.ವಿ.ಎಸ್‌ಸಿ ಅಂಡ್ ಎಹೆಚ್ ಪದವಿಯಲ್ಲಿ ಎಲ್ಲಾ ವರ್ಷಗಳಲ್ಲಿ ಗಳಿಸಿದ ಒಟ್ಟು ಶೇಕಡಾವಾರು ಅಂಕಗಳ ಅರ್ಹತೆ ಆಧಾರದ ಮೇಲೆ ಹಾಗೂ ಮೀಸಲಾತಿಗನುಗುಣವಾಗಿ ನಡೆಸಲಾಗುವುದು.
2. **ನಿಗಧಿಪಡಿಸಿದ ವಿದ್ಯಾರ್ಹತೆ:** ಅರ್ಜಿ ಸಲ್ಲಿಸಲು ನಿಗಧಿಪಡಿಸಲಾದ ಅಂತಿಮ ದಿನಾಂಕದಂದು ಅಭ್ಯರ್ಥಿಯು ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿಸಲಾದ ಯಾವುದೇ ಪಶುವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯ ಅಥವಾ ಕೃಷಿ ವಿಶ್ವವಿದ್ಯಾಲಯದಿಂದ ಬಿ.ವಿ.ಎಸ್‌ಸಿ./ಬಿ.ವಿ.ಎಸ್‌ಸಿ. ಅಂಡ್ ಎಹೆಚ್ ಪದವಿಯನ್ನು ಪಡೆದಿರಬೇಕು ಹಾಗೂ ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನ ಕಾಯ್ದೆ 1984 ರ ಅಡಿಯಲ್ಲಿ ನೋಂದಣಿಯಾಗಿರಬೇಕು.
3. **ವಯೋಮಿತಿ:** ಅಭ್ಯರ್ಥಿಗಳಿಂದ ಪೂರ್ಣಗೊಳಿಸಿದ ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಅಂತಿಮ ದಿನಾಂಕದಂದು ನಿಗಧಿಪಡಿಸಿದ ಕನಿಷ್ಠ ವಯೋಮಿತಿಯಲ್ಲಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು. ವಯೋಮಿತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ. ಡಿಪಿಎಆರ್/42/ಎಸ್‌ಆರ್‌ಆರ್/2008 ದಿನಾಂಕ: 18.12.2008 ರ ಮೇರೆಗೆ ನಿಗಧಿಪಡಿಸಲಾಗಿದೆ.

ಕನಿಷ್ಠ	18 ವರ್ಷಗಳು
ಗರಿಷ್ಠ	35 ವರ್ಷಗಳು
ಪ್ರವರ್ಗ IIಎ, IIಬಿ ಪ್ರವರ್ಗ IIIಎ, IIIಬಿ	38 ವರ್ಷಗಳು
ಪ.ಜಾ, ಪಪಂ. ಪ್ರವರ್ಗ–I	40 ವರ್ಷಗಳು

3.1 ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಸಶಸ್ತ್ರ ಕೇಂದ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳಷ್ಟು ಗರಿಷ್ಠ ವಯೋಮಿತಿಗೆ ವಿನಾಯಿತಿ ನೀಡಿದೆ.

ವಿವರಣೆ: ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಂತೆಯಾಗಲಿ) ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ; ಮತ್ತು

(ಎ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ;

ಅಥವಾ

(ಬಿ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ದೋಷ ಪೂರಿತನಾದವನೆಂದೋ ಅಥವಾ ವ್ಯಕ್ತಿಯ ಹಿಡಿತಕ್ಕೂ ದಾಟಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವನು; ಅಥವಾ

(ಸಿ) ಸ್ವಂತ ಕೋರಿಕೆ ಮೇರೆಗೆ ಅಲ್ಲದೆ ಸಂಸ್ಥೆಯ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ; ಅಥವಾ

(ಡಿ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯ ಪರಿಗಣಿಸಿದ ಮತ್ತು ಅವರಿಗೆ ಗ್ರಾಚುಯಿಟಿ ನೀಡಿರುವ ವ್ಯಕ್ತಿಯಲ್ಲದ ನಿರ್ಧಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಪ್ರಾಂತ್ಯದ ಸೇನೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು ಸೇರ್ಪಡೆಯಾಗುತ್ತಾರೆ.

(i) ನಿರಂತರ ಸೇವೆ ಸಲ್ಲಿಸಿ ನಿವೃತ್ತಿಹೊಂದಿದ ಪಿಂಚಣಿದಾರರು

(ii) ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಮರ್ಥತೆ ಹೊಂದಿ ಬಿಡುಗಡೆಯಾದ ವ್ಯಕ್ತಿ

(iii) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು

ವಿವರಣೆ:– ಕೇಂದ್ರ, ಸಶಸ್ತ್ರ ದಳದಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ "ಮಾಜಿ ಸೈನಿಕ" ನೆಂಬ ವರ್ಗದಡಿ ಬರುವ ವ್ಯಕ್ತಿಗೆ ನಿರ್ಧಿಷ್ಟ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ.

3.2 ಅಭ್ಯರ್ಥಿಯು ನ್ಯಾಷನಲ್ ಕ್ಯಾಡೆಟ್ ಕಾರ್ಪ್ಸ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕ್ಯಾಡೆಟ್ ಪರಿವೀಕ್ಷಕನಾಗಿ ಅವನು ಸೇವೆ ಸಲ್ಲಿಸಿದ್ದಷ್ಟು ವರ್ಷಗಳು.

4. ಹುದ್ದೆಗಳ ವರ್ಗೀಕರಣ: ವಿವಿಧ ಪ್ರವರ್ಗಗಳಿಗೆ ಮೀಸಲಾತಿ ವಿವರಗಳನ್ನು ಕೆಳಗೆ ಒದಗಿಸಲಾಗಿದೆ. ಆದಾಗ್ಯೂ ಪ್ರಕಟಿತ ಹುದ್ದೆಗಳಿಗಿಂತ ಕಡಿಮೆ ಸಂಖ್ಯೆಯ ಹುದ್ದೆಗಳಿಗೆ ಆಯ್ಕೆಯನ್ನು ನಡೆಸಬಹುದಾದ ಹಕ್ಕು (ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ) ಅಧಿಕಾರ ಆಯ್ಕೆ ಸಮಿತಿಗೆ ಇದೆ. ರೋಸ್ಟರ್ ಬಿಂದುವನ್ನು 21ನೇ ಬಿಂದುವಿನಿಂದ ಆರಂಭಿಸಲಾಗಿದೆ.

	200 ಹುದ್ದೆ	ಬ್ಯಾಕ್ ಲಾಗ್ ಹುದ್ದೆ	ಮ.ಅ.	ಮಾ.ಸೈ.	ಗ್ರಾ.ಅ	ಕ.ಮಾ.ಅ	ಇತರೆ	ಒಟ್ಟು
ಪ್ರವರ್ಗ – I	22	-	7	2	6	1	6	22
ಪ್ರವರ್ಗ – IIA	78	-	23	8	20	4	23	78
ಪ್ರವರ್ಗ – IIB	19	-	6	2	5	1	5	19
ಪ್ರವರ್ಗ – IIIA	8	-	3	-	3	-	2	8
ಪ್ರವರ್ಗ – IIIB	14	-	5	1	4	1	3	14
ಪಜಾ	30	66	29	9	24	5	29	96
ಪಪಂ	6	10	5	1	5	1	4	16
ಸಾಮಾನ್ಯ ಅರ್ಹತೆ	23	-	7	2	6	1	7	23
ಒಟ್ಟು	200	76	85	25	73	14	79	276

ಷರಾ:– ವಿಶೇಷ ನೇಮಕಾತಿ ನಿಯಮದಡಿಯಲ್ಲಿ 287 ಹುದ್ದೆಗಳನ್ನು ತುಂಬಿದಾಗ ಇತರೆ ಪ್ರವರ್ಗಗಳಲ್ಲಿ ಉಂಟಾದ ಕೊರತೆಯನ್ನು ಸಾಮಾನ್ಯ ಅಭ್ಯರ್ಥಿಗಳಿಗೆ ನೇಮಕಾತಿ ಮಾಡಲಾದ ಕಾರಣ ಅಷ್ಟೂ ಹುದ್ದೆಗಳನ್ನು ಈ ನೇಮಕಾತಿಯಲ್ಲಿ ಇತರೆ ಪ್ರವರ್ಗಗಳಿಗೆ ಹಂಚಲಾಗಿದೆ.

ಮೇಲೆ ಕಾಣಿಸಿರುವ ವರ್ಗೀಕರಣವು ಮೀಸಲಾತಿ ಆದೇಶಗಳಲ್ಲಿ ಮಾರ್ಪಾಡು ಆದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಪ್ರಸ್ತುತ ಸುತ್ತೋಲೆ ಸಂ.ಸಿಆರ್‌ಸುಇ/16/ಸೇನೇನಿ/2008 ದಿನಾಂಕ:01.09.2008ರ ಸೂಚನೆಯನ್ನು ಅನುಸರಿಸಲಾಗುವುದು. ಅಲ್ಲದೇ, ಹಾಲಿ ಆಹ್ವಾನಿಸಿದ 276 ಖಾಲಿ ಹುದ್ದೆಗಳ ಸಂಖ್ಯೆ ಮುಂದೆ ಸರ್ಕಾರದ ಆದೇಶಕ್ಕನುಗುಣವಾಗಿ ಹೆಚ್ಚು ಅಥವಾ ಕಡಿಮೆಯಾಗುವ ಬದಲಾವಣೆಗೆ ಒಳಪಟ್ಟಿರುತ್ತದೆ.

4.1 **ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು**

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅದರ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು — ನಮೂನೆ 'ಡಿ'

ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು — ನಮೂನೆ 'ಇ'

ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು — ನಮೂನೆ 'ಎಫ್'

ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡು ಅದೇ ಪ್ರಮಾಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಅರ್ಹರಾದಲ್ಲಿ ಮಾತ್ರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

4.2 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹೊರತುಪಡಿಸಿ ಉಳಿದಂತೆ ಯಾವುದೇ ಪ್ರವರ್ಗಗಳ ಅಭ್ಯರ್ಥಿಗಳಲ್ಲಿ ಕೊರತೆಯಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡುವ ಅಧಿಕಾರ ಆಯ್ಕೆ ಸಮಿತಿಗಿದೆ.

5. ಗ್ರಾಮೀಣ ಅಭ್ಯರ್ಥಿಗಳೆಂದು ಮೀಸಲಾತಿ ಬಯಸುವವರು ಸರ್ಕಾರದ ಆದೇಶ ಸಂಖ್ಯೆ. ಸಿಅಸುಇ/08/ಸೆನೆನಿ/2001 ದಿನಾಂಕ: 13.02.2001 ರಲ್ಲಿ ನಿಗಧಿಪಡಿಸಿದ ನಮೂನೆ–1 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಅಸುಇ/96/ಸೆನೆನಿ/2005 ದಿನಾಂಕ: 10.08.2005ರಲ್ಲಿ ನಿಗಧಿಪಡಿಸಲಾದ ನಮೂನೆ–2 ರಲ್ಲಿ ಅಭ್ಯರ್ಥಿಗಳು ಉತ್ತೀರ್ಣರಾದ ಸಂಸ್ಥೆಯ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರಿಂದ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿಯೊಂದಿಗೆ ಪಡೆಯಬೇಕು. ಈ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ಅಂತಿಮವಾಗಿ ವ್ಯಾಸಂಗಮಾಡಿದ ಸಂಸ್ಥೆ / ಶಾಲೆಗಳಲ್ಲಿ ಅಭ್ಯಾಸ ಮಾಡಿದ್ದಲ್ಲಿ ಈ ಬಗ್ಗೆ ಆ ಎಲ್ಲಾ ಸಂಸ್ಥೆಗಳಲ್ಲಿ ತಪಾಸಣೆ ಆಗಿರಬೇಕು.

ಅ) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಅಧಿಸೂಚನೆ ಸಂಖ್ಯೆ. ಸಂವ್ಯಶಾಇ.59 ಶಾಸನ 2000, ದಿನಾಂಕ: 06.01.2001 ರಲ್ಲಿ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿಗಾಗಿ ವಿಧೇಯಕ 2000ದಡಿ ಅವಕಾಶ ಕಲ್ಪಿಸಿ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು ದಿನಾಂಕ: 13.02.2001 ರಲ್ಲಿ ಜಾರಿಗೊಳಿಸಲಾದ ಆದೇಶ ಸಂಖ್ಯೆ ಸಿಆಸುಇ 08 ಸೆನೆನಿ 2001 ನಿಯಮಗಳ ಕಂಡಿಕೆ 3, 4 ಹಾಗೂ 5(1) ರಿಂದ (3) ರನ್ನು ಈ ಕೆಳಗೆ ಉದ್ಧರಿಸಿದೆ.

3. ಸದರಿ ಅಧಿನಿಯಮದಲ್ಲಿ ಗ್ರಾಮೀಣ ಅಭ್ಯರ್ಥಿಯನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ.

i) ಗ್ರಾಮೀಣ ಅಭ್ಯರ್ಥಿ ಎಂದರೆ ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯ ಎಸ್.ಎಸ್.ಎಲ್.ಸಿ. ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ;

4. ಈ ಹಿನ್ನೆಲೆಯಲ್ಲಿ ಮೇಲೆ ವಿವರಿಸಿದ ಅಂಶಗಳನ್ನು ಒಳಗೊಂಡ, ಅಂದರೆ (1) ವ್ಯಾಸಂಗ (Study) (2) ಮೀಸಲಾತಿಯ ವರ್ಗ ಮತ್ತು (3) ಮೇಲುಸ್ತರದ ಪರಿಕಲ್ಪನೆ (Creamy Layer Concept) ಈ ಅಂಶಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಯಾರು ನೀಡಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

5. ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000 ರ ಸೆಕ್ಷನ್ 5 ರಿಂದ ಈ ಕೆಳಕಂಡ ಕಾರ್ಯ ವಿಧಾನವನ್ನು ನಿಗಧಿಪಡಿಸಿದೆ.

1 ಸಂಬಂಧಿಸಿದ ಅಭ್ಯರ್ಥಿಯು ಯಾವ ಇತರೆ ಹಿಂದುಳಿದ ವರ್ಗಕ್ಕೆ (Other Backward Class) ಸೇರಿದ್ದಾನೆ (ಅದರಲ್ಲಿ ಅವನು ಮೇಲುಸ್ತರದ ಪರಿಕಲ್ಪನೆಯಡಿಯಲ್ಲಿ (Creamy Layer Concept) ಬರುವುದಿಲ್ಲವೆನ್ನುವುದು ಒಳಗೊಂಡಿರುತ್ತದೆ) ಎನ್ನುವ ಬಗ್ಗೆ ಸರ್ಕಾರ (ಅಂದರೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಸಮಾಜ ಕಲ್ಯಾಣ ಇಲಾಖೆ) ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ

ಮೀಸಲಾತಿ) ಅಧಿನಿಯಮ, 1990 ರಡಿಯಲ್ಲಿ ನಿಗಧಿಪಡಿಸಿದ ಕಾರ್ಯ ವಿಧಾನದ ಪ್ರಕಾರ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು. (ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ– I ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ (Creamy Layer Concept) ಅನ್ವಯವಾಗುವುದಿಲ್ಲ). ಅಂದರೆ ಜನರಲ್ ಮೆರಿಟ್ ಸೇರಿದಂತೆ ಹಿಂದುಳಿದ ವರ್ಗಗಳಾದ ಪ್ರವರ್ಗ 2ಎ, ಪ್ರವರ್ಗ 2ಬಿ, ಪ್ರವರ್ಗ 3ಎ, ಮತ್ತು ಪ್ರವರ್ಗ 3ಬಿ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ ಅನ್ವಯವಾಗುತ್ತದೆ.

2 ಜನರಲ್ ಮೆರಿಟ್ ವರ್ಗಕ್ಕೆ ಸೇರಿದ ಅಂದರೆ ಮೇಲುಸ್ತರದ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಬಾರದ ಗ್ರಾಮೀಣ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಸೀಲ್ದಾರ್‌ರವರಿಂದ ಈ ಆದೇಶಕ್ಕೆ ಲಗತ್ತಿಸಿದ ನಮೂನೆ–1 ರಲ್ಲಿ ಪಡೆಯತಕ್ಕದ್ದು.

6. ಸರ್ಕಾರಿ ಅಧಿಸೂಚನೆ ಸಂಖ್ಯೆ. ಸಿಆಸುಇ/71/ಸೆನೆನಿ/2001 ದಿನಾಂಕ: 24.10.2002 ರನ್ವಯ ಶೇಕಡಾ 5% ರಷ್ಟು ಹುದ್ದೆಗಳನ್ನು (18 ಹುದ್ದೆಗಳು) ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಇದಕ್ಕೆ ಆಧಾರವಾಗಿ ಕ್ಯುಮ್ಯುಲೇಟೀವ್ ರೆಕಾರ್ಡ್‌ನ ಪ್ರಮಾಣೀಕೃತ ಉಧೃತಾ ಭಾಗವನ್ನು ಲಗತ್ತಿಸುವುದು.

7. ಈ ಅಧಿಸೂಚನೆಯನ್ವಯ ಆಯ್ಕೆಯಾಗುವ ಅಭ್ಯರ್ಥಿಗಳು ರಾಜ್ಯದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರತಕ್ಕದ್ದು.

8. ಅರ್ಜಿಯೊಂದಿಗೆ ಲಗತ್ತಿಸಬೇಕಾದ ದೃಢೀಕೃತ ಜೆರಾಕ್ಸ್ ದಾಖಲಾತಿಗಳು:–

(i) (ಎ) ಬಿ.ವಿ.ಎಸ್‌ಸಿ./ಬಿ.ವಿ.ಎಸ್‌ಸಿ ಅಂಡ್ ಎಹೆಚ್ ಪದವಿಯ ಎಲ್ಲಾ ವರ್ಷಗಳ (ಸೆಮಿಸ್ಟರ್) ಅಂಕಪಟ್ಟಿಗಳು

(ಬಿ) ಸಂಬಂಧಪಟ್ಟ ವಿಶ್ವ ವಿದ್ಯಾನಿಲಯ ನೀಡಿರುವ ತ್ರೈಮಾಸಿಕ ಪದ್ದತಿಯ ಅಂಕಪಟ್ಟಿಯ ಪರಿವರ್ತಕ ಕೋಷ್ಠಕ ಪ್ರಮಾಣ ಪತ್ರ (ಸರ್ಟಿಫಿಕೇಟ್‌ಗಳು)

(Trimester system's Marks card conversion certificate issued by the concerned University

(ii) ಚಾಲ್ತಿಯಲ್ಲಿರುವ ಪಶುವೈದ್ಯಕೀಯ ಪರಿಷತ್ತಿನ ನೋಂದಣಿ ಪ್ರಮಾಣ ಪತ್ರ

(iii) ಘಟಿಕೋತ್ಸವ ಪದವಿ ಪ್ರಮಾಣ ಪತ್ರ (ಈಗಾಗಲೇ ಪಡೆದಿದ್ದಲ್ಲಿ ಮಾತ್ರ)

(iv) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ / ಕ್ಯುಮ್ಯುಲೇಟೀವ್ ರೆಕಾರ್ಡ್‌ನ ಪ್ರಮಾಣೀಕೃತ ಉಧೃತಾ ಭಾಗ

(v) ಅರ್ಜಿಯೊಂದಿಗೆ ಜಂಟಿ ನಿರ್ದೇಶಕರು (ಆಡಳಿತ) ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ನಿರ್ದೇಶನಾಲಯ, ಬೆಂಗಳೂರು ರವರ ಹೆಸರಿಗೆ ಪಡೆದ ರೂ. 100/– **(ರೂ. ನೂರು ಮಾತ್ರ)** ಹಾಗೂ ಪ.ಜಾ., ಪ.ಪಂ., ಪ್ರವರ್ಗ– I ರವರು ರೂ. 50/– **(ರೂ. ಐವತ್ತು ಮಾತ್ರ) ರ** ಮೌಲ್ಯದ ಕ್ರಾಸ್ ಮಾಡಿದ ಇಂಡಿಯನ್ ಪೋಸ್ಟಲ್ ಆರ್ಡರ್ / ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ನಿಗಧಿತ ಶುಲ್ಕವನ್ನು ಸಂದಾಯ ಮಾಡತಕ್ಕದ್ದು. ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(vi) ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).

(vii) ಪ.ಜಾ., ಪ.ಪಂ., ಪ್ರವರ್ಗ– I, ಪ್ರವರ್ಗ II ಎ, ಪ್ರವರ್ಗ II ಬಿ, ಪ್ರವರ್ಗ III ಎ, ಮತ್ತು ಪ್ರವರ್ಗ III ಬಿ ಮೀಸಲಾತಿ ಕೋರಿದ್ದಲ್ಲಿ ಸಂಬಂಧಿತ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

(viii) ಕನ್ನಡ ಮಾಧ್ಯಮ/ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಬಯಸುವವರು ಅವಶ್ಯ ದಾಖಲಾತಿ ಒದಗಿಸುವುದು.

(ix) ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಗುಣ ಮತ್ತು ನಡತೆ ಪ್ರಮಾಣ ಪತ್ರಗಳು ದ್ವಿಪ್ರತಿಗಳಲ್ಲಿ

(x) ಅರ್ಜಿಯಲ್ಲಿ ಇತ್ತೀಚಿನ ಪಾಸ್ ಪೋರ್ಟ್ ಸೈಜಿನ ಎರಡು ಭಾವಚಿತ್ರಗಳನ್ನು ಅಂಟಿಸಿರಬೇಕು.

9. ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಗಳನ್ನು ಎಲ್ಲಾ ಸಂಬಂಧಿಸಿದ ದಾಖಲಾತಿಗಳು / ಅಂಕಪಟ್ಟಿಗಳ ದ್ವಿಪ್ರತಿಗಳೊಂದಿಗೆ ಖುದ್ದಾಗಿ ಅಥವಾ ನೋಂದಣಿ ಅಂಚೆ ಮುಖಾಂತರ ದಿನಾಂಕ:10.02.2011 ರ ಸಂಜೆ 5.30 ಘಂಟೆಯೊಳಗೆ "ಸದಸ್ಯ ಕಾರ್ಯದರ್ಶಿಗಳು, ಇಲಾಖಾ ಆಯ್ಕೆ ಸಮಿತಿ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಆಯುಕ್ತರವರ ಕಾರ್ಯಾಲಯ, 2ನೇ ಮಹಡಿ, ಸರ್.ಎಂ. ವಿಶ್ವೇಶ್ವರಾಯ ಚಿಕ್ಕ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560 001"'ಇವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಯಾವುದೇ ಕಾರಣದಿಂದಾಗಿ ಅರ್ಜಿಯು ಇಲಾಖೆಗೆ ತಡವಾಗಿ ತಲುಪಿದ್ದಕ್ಕಾಗಿ ಅಥವಾ ಅರ್ಜಿಯು ತಲುಪದೇ ಇರುವುದಕ್ಕೆ ಆಯ್ಕೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ. ನಿಗಧಿತ ದಿನಾಂಕ ಮುಗಿದ ನಂತರ ಸಲ್ಲಿಸಿದ ಮೇಲ್ಕಂಡ ಅವಶ್ಯಕ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸದ ಮತ್ತು ಅರ್ಜಿಯ ನಿಗಧಿತ ಅಂಕಣಗಳಲ್ಲಿ ಸಹಿ ಮಾಡದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ದಿನಾಂಕವು ಬಂದ್/ಮುಷ್ಕರ ರಜೆಯಾಗಿದ್ದಲ್ಲಿ ಮಾರನೆಯ ದಿನವು ಕೊನೆಯ ದಿನಾಂಕವಾಗಿರುತ್ತದೆ.

10. ಅರ್ಜಿಗಳನ್ನೊಳಗೊಂಡ ಲಕೋಟೆಯ ಮೇಲೆ "ಪಶುವೈದ್ಯಾಧಿಕಾರಿಗಳ ಹುದ್ದೆಗೆ ಅರ್ಜಿ" ಎಂದು ದಪ್ಪ ಅಕ್ಷರಗಳಲ್ಲಿ ಬರೆಯತಕ್ಕದ್ದು. ಖುದ್ದಾಗಿ ಅರ್ಜಿಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಸ್ವೀಕೃತಿ ಪಡೆಯತಕ್ಕದ್ದು.

11. ಈ ಪ್ರಕಟಣೆ ಹಾಗೂ ಅರ್ಜಿ ನಮೂನೆಯ ಕುರಿತು ಏನಾದರೂ ವಿವರಣೆ ಬೇಕಾದಲ್ಲಿ ಆಯುಕ್ತರ ಕಛೇರಿಯ ಜಂಟಿ ನಿರ್ದೇಶಕರು (ಆಡಳಿತ) ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ. 22864441

ಆಯುಕ್ತರು,
ಪದನಿಮಿತ್ತ ಇಲಾಖಾ ಆಯ್ಕೆ ಸಮಿತಿ ಅಧ್ಯಕ್ಷರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ,
ಬೆಂಗಳೂರು–560 001.

ಪಿ.ಆರ್.8

OFFICE OF THE COURT OF SMALL CAUSES, BENGALURU

TENDER NOTIFICATION

